ರಾಯಚೂರು ಜಿಲ್ಲೆಗೆ ಬರುತ್ತದೆ. ಹುಬ್ಬಳ್ಳಿ ಧಾರವಾಡ ಜಿಲ್ಲೆಗೆ ಬರುತ್ತದೆ. ಧಾರವಾಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಅವರು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದಾಗ ಕೇವಲ 40 ಕಿ.ಮೀ. ಇರತಕ್ಕ ಧಾರವಾಡ ಜಿಲ್ಲೆಯಲ್ಲಿರತಕ್ಕ ಶಿಗ್ಗಾವ್ ಪ್ರದೇಶ ಹುಬ್ಬಳ್ಳಿಗೆ ಬಹಳ ಹತ್ತಿರವಾಗುತ್ತದೆ. ಅದಕ್ಕೆ ಅದ ಮಾದರಿಯೊಳಗೆ ಕೇವಲ ಒಂದೆರಡು ಟ್ರೇಡ್‌ಗಳನ್ನಾದರೂ ಶಿಫ್ಟ್ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಬೇರೆ ಐ.ಟಿ.ಐ.ಗಳನ್ನು ನಾವು ಟ್ರೇಡ್‌ಗಳನ್ನು ಶಿಫ್ಟ್ ಮಾಡಿಬಿಟ್ಟರೆ ತೊಂದರೆಯಾಗುತ್ತದೆ. ನಾವುಎಲ್ಲಿಂದ ಶಿಫ್ಟ್ ಮಾಡುತ್ತೇವೆ ಅಲ್ಲಿ ಕ್ಲೋಸ್ ಮಾಡಬೇಕಾಗುತ್ತದೆ. ಟ್ರೇಡ್‌ಗಳನ್ನು ಶಿಫ್ಟ್ ಮಾಡುವಾಗ ಬಹಳ ಆಲೋಚನೆಯಿಂದ ಮಾಡಬೇಕಾಗುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಹುಬ್ಬಳ್ಳಿಯಲ್ಲಿ ಐ.ಟಿ.ಐ. ಕಾಲೇಜು ಇದೆ. ಅಲ್ಲಿ ಅನೇಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆ ಕಾರಣದಿಂದಲೇ ಕಳೆದ ಎರಡು ವರ್ಷಗಳ ಹಿಂದೆ ಕುಕನೂರಿಗೆ ಶಿಫ್ಟ್ ಮಾಡಿಬಿಟ್ಟಿದ್ದೀರಿ, ಈಗಲೂ ಅಲ್ಲಿದ್ದ ಅಧಿಕಾರಿಗಳನ್ನು ಪ್ರಿನ್ಸಿಪಾಲನ್ನು ನಾನು ಭೇಟಿಯಾದಾಗ ಶಿಗ್ಗಾವಿಗೆ ಮಾಡೋಕೆ ಏನೂ ತೊಂದರೆ ಇಲ್ಲ, ಸರ್ಕಾರ ಆದೇಶ ಮಾಡಿದರೆಮಾಡಿಕೊಡುತ್ತೇವೆ ಎಂದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎರಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದರೆ ಯಾವುದೇ ತೊಂದರೆ ಸರ್ಕಾರಕ್ಕಾಗುವುದಿಲ್ಲ, ಇದರಿಂದ ಹಣಕಾಸಿನ ತೊಂದರೆಯೂ ಆಗುವುದಿಲ್ಲ. ಆ ಕಾರಣದಿಂದ ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಹುಬ್ಬಳ್ಳಿಯಿಂದ ಶಿಗ್ಗಾವಿಗೆ ಒಂದರೆಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿ ಕೊಡಬೇಕೆಂದು ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಸದಸ್ಯರು ಹುಬ್ಬಳ್ಳಿಯಲ್ಲಿ ಸ್ಥಳ ಇಲ್ಲಾಂತ ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟು ಸರಿಯಾಗಿ ಸ್ಥಳ ಒದಗಿಸುತ್ತೇವೆ. ಹೊಸ ಐ.ಟಿ.ಐ. ಆಲೋಚನೆ ಮಾಡುವಾಗ ಇದನ್ನೂ ಗಮನದಲ್ಲಿಡುತ್ತೇವೆ.

ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರಕ್ಕೆ ಮಂಜೂರಾದ ಮನೆಗಳು

1063-ಶ್ರೀ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರ ಕ್ಷೇತ್ರಕ್ಕೆ ಮಂಜೂರು ಮಾಡಿರುವ ಮನೆಗಳು ಎಷ್ಟು?

ಆ) ಎಷ್ಟು ಮನೆಗಳು ನಿರ್ಮಾಣ ಹಂತದಲ್ಲಿವ ?

ಇ) ಎಷ್ಟು ಮನೆಗಳು ಪೂರ್ಣಗೊಂಡಿವೆ?

ಶ್ರೀ ಗೋಪಿನಾಥ ಆರ್. ಸಾಂದ್ರ (ವಸತಿ ಸಚಿವರು):

ಅ) 1,000 ಮನೆಗಳು.

ಆ) 35 ಮನೆಗಳು.

ಇ) ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷಣೆಯವರೇ, 91-92-93ರಲ್ಲಿ ಸರ್ಕಾರದ ಹೇಳಿಕೆ ಪ್ರಕಾರ 2000 ಮನೆಗಳು ನನ್ನ ಕ್ಷೇತ್ರದಲ್ಲಾಗಬೇಕಾಗಿತ್ತು. ಈ 2000 ಮನೆಗಳನ್ನು ಏಕೆ ಮಂಜೂರು ಮಾಡಿಲ್ಲ, ತಮ್ಮ ಉತ್ತರದಲ್ಲಿ ಕೇವಲ 1000 ಮನೆಗಳನ್ನು ಮಂಜೂರು ಮಾಡಿದ್ದೇವೆ ಎಂದಿದ್ದೀರಿ. ಎರಡನೆಯದಾಗಿ ಈಗ ಮಂಜೂರುರಾಗಿರುವ 1000 ಮನೆಗಳಿಗೆ ಏಜೆನ್ಸಿಗಳನ್ನು ಆಗಲೇ ಫಿಕ್ಸ್ ಮಾಡಿದ್ದೀರಾ ಮತ್ತು ಎಷ್ಟು ದಿವಸದಲ್ಲಿ ಈ ಮನೆಗಳನ್ನು ನಿರ್ಮಾಣ ಮಾಡಿಸಿಕೊಡುತ್ತೀರಿ?

ಶ್ರೀ ಗೋಪಿನಾಥ ಆರ್. ಸಾಂಡ್ರ : 90-91,91-92, ಸಾಲುಗಳಲ್ಲಿ ಒಂದೊಂದು ಸಾವಿರದ ಮನೆಗಳನ್ನು ಕಟ್ಟುವ ಟಾರ್ಗೆಟ್ ನಮಗಿತ್ತು. ಕಾರಣಾಂತರಗಳಿಂದ ಆಗಲಿಲ್ಲ, ಏಕೆ ಆಗಲಿಲ್ಲ ಎಂದರೆ ಅಲ್ಲಿ ಟಾಸ್ಕ್ ಫೋರ್ಸ್ ಕಮಿಟಿಯವರು ನಮಗೆ ನಿವೇಶನ ಕೊಡಲಿಲ್ಲ, ಏಕೆ ಆಗಲಿಲ್ಲ ಎಂದರೆ ಅಲ್ಲಿ ಟಾಸ್ಕ್ ಫೋರ್ಸ್ ಕಮಿಟಿಯವರು ನಮಗೆ ನಿವೇಶನ ಕೊಡಲಿಲ್ಲ, ಎರಡನೆಯದು , ನಮ್ಮಲ್ಲಿ ಸ್ವಪ ಆಶ್ರಯ ಸ್ಕೀಂ ಅಸ್ತವ್ಯಸ್ತ ಆಗಿದ್ದರಿಂದ ಸರಿಯಾಗಿ ಅದನ್ನು ಸಾದರಪಡಿಸಲಿಕ್ಕಾಗಲಿಲ್ಲ. ಈಗ ಅದನ್ನು ನಾವುಮಾಡುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಮಂತ್ರಿಗಳಿಂದ ಈ ಉತ್ತರ ನಿರೀಕ್ಷಣೆ ಮಾಡಿರಲಿಲ್ಲ, ಟಾಸ್ಕ್‌ಫೋರ್ಸ್ ಕಮಿಟಿ ಅಧ್ಯಕ್ಷ ನಾನುದುರದೃಷ್ಟದಿಂದ. ಸುಮಾರು 1800 ಚಿಲ್ಲರೆ ನಿವೇಶನಗಳನ್ನು ಮತ್ತು ಫಲಾನುಭವಿಗಳ ಲಿಸ್ಟನ್ನು ಸಹ ತಮಗೆ ಕಳುಹಿಸಿ ಬಹಳ ದಿವಸವಾಯಿತು. ಅದರಲ್ಲಿ ಬಂದಿಲ್ಲ ಎಂದು ಹೇಳುವುದು ಸತ್ಯಕ್ಕೆ ಅಷ್ಟೇನೂ ಹತ್ತಿರವಾಗಿಲ್ಲ. ದಯವಿಟ್ಟು ಅದನ್ನು ಪರಿಶೀಲನೆ ಮಾಡಿನೋಡಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ನಾವು ಒಟ್ಟು 1000 ಮನೆಗಳನ್ನು ಮಾಡಬೇಕೆಂದಿದ್ದೆವು ಅದರಲ್ಲಿ 915 ಮನೆಗಳನ್ನು ರೂರಲ್ ಏರಿಯಾದಲ್ಲಿ ಹಾಗೂ 85 ಮನೆಗಳನ್ನು ಅರ್ಬನ್ ಏರಿಯಾದಲ್ಲಿ ಮಾಡಬೇಕೆಂದು ಟಾರ್ಗೆಟಿತ್ತು ಈವರೆಗೆ ಮೂವತ್ತೈದು ನೆಗಳು ಅಂಡರ್ ಕನ್‌ಸ್ಟ್ರಕ್ಷನ್ ಇವೆ. ನಮ್ಮ ಆಫೀಸಿನ ರೆಕಾರ್ಡ್ಸ್ ಪ್ರಕಾರ 256 ನಿವೇಶನಗಳನ್ನು ನಮಗೆ ತಾಬಾಕು ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅದು ಸರಿಯಲ್ಲ, ಜಿಲ್ಲಾಧಿಕಾರಿಗಳು 1800 ಫಲಾನುಭವಿಗಳ ಲಿಸ್ಟ್‌ನ್ನು ಆಗಲೇ ತಮಗೆ ಕಳಿಸಿ ನಾಲ್ಕೈದು ತಿಂಗಳ ಮೇಲಾಗಿದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಅದನ್ನು ಪುನರ್ ಪರಿಶೀಲನೆ ಮಾಡಿ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ಎಲ್.ಜಾಲಪ್ಪ : 910 ಅಕ್ಟೋಬರ್ ನವೆಂಬರ್‌ಗಳಲ್ಲಿ 11,600 ಮನೆಗಳು ಬಿದ್ದುಹೋದುವು, ಒಂದು ಮನೆಯನ್ನು ಇವತ್ತಿನವರೆಗೂ ಕಟ್ಟಲಿಲ್ಲ ಆಶ್ರಯ ಯೋಜನೆಯಲ್ಲಾದರೂ ಅವರಿಗೆ ಆಶ್ರಯ ಸಿಗಲಿಲ್ಲ, ಹಾಗಾಗಿ ನಿಮ್ಮನ್ನು ನಂಬಿಕೊಂಡಿರುವವರ ಗತಿಯೇನು ಸ್ವಾಮಿ? ಬರಿ ಬಾಯಿಮಾತೇ ಆಯಿತೇ ಅಥವಾ ಇದನ್ನು ಏನಾದರೂ ಕಾರ್ಯರೂಪಕ್ಕೆ ತರುವುದಕ್ಕೆ ನಿಮಗೆ ಶಕ್ತಿ ಇದೆಯಾ? ಸುಮ್ಮನೆ ಏಕೆ ಆಸೆ ಹುಟ್ಟಿಸಿ ಆಶ್ವಾಸನೆ ಕೊಡುತ್ತಿದ್ದೀರಿ?

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಸರ್ಕಾರದ ಕಾರ್ಯಕ್ರಮಗಳನ್ನು ಶೀಘ್ರಗತಿಯಿಂದ ನಾವು ಜಾರಿ ಮಾಡುತ್ತೇವೆ. ಈಗಾಗಲೇ 256 ನಿವೇಶನ

ನಮಗೇನು ಕೊಟ್ಟಿದ್ದರು ಅವುಗಳಲ್ಲಿ 35 ಮನೆಗಳನ್ನು ಮಾಡಿದ್ದೆವು. ಅದು ತಡವಾಗಿಯಾಗಿದೆ. ಅದು ನಿಜ, ಆದರೆ ಈ ಸಲ 150 ಮನೆಗಳನ್ನು ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ 93 ಮಾರ್ಚಿಯೊಳಗೆ ಮಾಡುತ್ತೇವೆ. ನಿನ್ನೆಯಲ್ಲ ಮೊನ್ನೆ ಕ್ಯಾಬಿನೆಟ್ ನಲ್ಲಿ ಒಂದು ನಿರ್ಣಯವಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯವರಿಂದ ಸರ್ಕಾರಿ ಆದೇಶವನ್ನು ಧಿಕ್ಕರಿಸಿ ಖಾಲಿ ಜಾಗಗಳನ್ನು ವಿಲೇವಾರಿ.

1075- ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದೇ ಆದೇಶಗಳನ್ನು ಧಿಕ್ಕರಿಸಿ ಬೆಂಗಳೂರು ಮಹಾನಗರ ಪಾಲಿಕೆಯು ಖಾಲಿ ಇರುವ ಸ್ಥಳಗಳು ಮತ್ತು ಕಟ್ಟಡಗಳ ಭಾಗಗಳನ್ನು ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಂತಹ ವಿಲೇವಾರಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಣಿಯವರೆ, ಇದು ಜವಾಬ್ದಾರಿಯುತವಾಗಿ ಕೊಟ್ಟಂತಹ ಉತ್ತರವೋ ಅಥವಾ ಬೇಜವಾಬ್ದಾರಿಯಿಂದ ಕೊಟ್ಟ ಉತ್ತರವೋ ಎಂದು ನಾನು ಹೇಳಬೇಕಾಗುತ್ತದೆ. ಇದನ್ನು ನಾನುಬಹಳ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ. ಅವರಿಗೆ ಯಾವಾಗ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಇಷ್ಟವಿರುವುದಿಲ್ಲೇ ಆಗ ಈ ತರಹ ಜವಾಬನ್ನು ಕೊಡುತ್ತಾರೆ. ನಾನೇ ಸಾಕಷ್ಟು ಕಾಗದವನ್ನು ನಗರಾಭಿವೃದ್ಧಿ ಮಂತ್ರಿಗಳಿಗೆ ಬರೆದಿದ್ದೇನೆ. ಕೆಲವು ಕಡೆ ಸ್ಪೇ ಕೊಟ್ಟಿದ್ದಾರೆ. ಅದು ಹಾಗೆಯೇ ಉಳಿದುಕೊಂಡಿದೆ. ಬೆಂಗಳೂರು ನಗರದಲ್ಲಿ ಈ ತರಹ ಅಕ್ರಮಗಳು ಬೆಂಗಳೂರು ಕಾರ್ಪೊರೇಷನ್ ನಿಂದ ಬಹಳ ನಡೆಯುತ್ತಿದೆ ಎಂದು ಗೊತ್ತಿದೆ ಗೊತ್ತಿದ್ದರೂ ಕೂಡ ಇದು ಗಮನಕ್ಕೆ ಬಂದಿಲ್ಲ. ಉತ್ತರ ಕೊಡುವುದು ಉದ್ಭವಿಸುವುದಿಲ್ಲವೆಂದರೆ ಅದಕ್ಕೆ ಈ ಸದನ ಏತಕ್ಕೆ ಇರಬೇಕು? ಅದಕ್ಕೆ ಒಬ್ಬರು ಏತಕ್ಕೆ ಮಂತ್ರಿಗಳು ಇರಬೇಕು. ಹೌಸಿಂಗ್ ಸೆಕ್ರೆಟರಿ ಏತಕ್ಕೆ ಇರಬೇಕು? ಕಳ್ಳತನವನ್ನು ಅಕ್ರಮವನ್ನು ಮುಚ್ಚಿರುವುದಕ್ಕೆ ಮಾಡುತ್ತಿದ್ದಾರೆಯೇ? ಈ ತರಹ ಜವಾಬನ್ನು ಏತಕ್ಕೆ ಕೊಡುತ್ತಿದ್ದಾರೆ. ನಾನು ಕಮೀಷನರ್ ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ, ಡೆಪ್ಯೂಟಿ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ.

ಉಪಾಧ್ಯಕ್ಷಣಿಯವರು : ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ?

ಶ್ರೀ ಎ.ಕೆ. ಅನಂತಕೃಷ್ಣ : ಏನೂ ಇಲ್ಲ ಎಂದು ಉತ್ತರ ಕೊಟ್ಟಮೇಲೆ ಏನು ಮಾಡುವುದು. ಶಿವಾಜಿನಗರದ ಸ್ಪೇಡಿಯಂನಲ್ಲಿ ಗೇಟ್ ಕೊಟ್ಟಿದ್ದಾರೆ. ಟಿಕೇಟ್ ಕೌಂಟರನ ಜಾಗವನ್ನು ಕೊಟ್ಟಿದ್ದಾರೆ. ಅಲ್ಲಿ ಎರಡು ಟಾಯ್‌ಲೆಟ್ ಅನ್ನು ಕೊಟ್ಟಿದ್ದಾರೆ. ಮೂರು ಅಂಗಡಿಗಳು ಆಗಿ ಬಿಟ್ಟು ಇನ್ನೊಂದು ಕಡೆ ಒಂದು ಅಂಗಡಿಯನ್ನು ಹಾಕುತ್ತಿದ್ದಾರೆ. ಮಾಡಬಾರದೆಲ್ಲವನ್ನು ಮಾಡುತ್ತಿದ್ದಾರೆ ಎಂದು ನಾನು